


SARAYU - Kannada Monthly Regn. No. KARKAN/2014/62363
Sep Vol. : 10 Issue : 6 5124/ಶುಭಕೃತ್ ಸಂವತ್ಸರ ನವೆಂಬರ್ 2023 ಪುಟ 4 Rs. 10/-
Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24

# ಶ್ರೀರಾಮ ವಿದ್ಯಾಕೇಂದ್ರ – 22ನೇ ವರ್ಷದ ನವದಂಪತಿ ಸಮಾವೇಶ 01.10.2023










* ನಮ್ಮ ಕುಟುಂಬವನ್ನು ನಾವು ರಕ್ಷಿಸಿದರೆ ಕುಟುಂಬವು ನಮ್ಮನ್ನು ರಕ್ಷಿಸುತ್ತದೆ.
* ತೃಪ್ತಿಯೇ ಕುಟುಂಬದ, ಸುಖದ ಮೂಲಾಧಾರ.
* ಪರಸ್ಪರ ಅರಿತು ಬಾಳುವುದು ಹಾಗೂ ಹೊಂದಾಣಿಕೆಯಲ್ಲಿ ಜೀವನದ ಯಶಸ್ಸು ಇದೆ.

* ದಿನಪೂರ್ತಿ ನಡೆದ ಕಾರ್ಯಕ್ರಮದಲ್ಲಿ 77 ಜೋಡಿ ದಂಪತಿಗಳು ಭಾಗವಹಿಸಿದ್ದರು.

* ಹಿರಿಯ ದಂಪತಿಗಳಾಗಿ ಪ್ರೊ. ಗಣಪತಿ ಭಟ್ ಕುಳಮರ್ವ ಹಾಗೂ ವಸಂತಿ ಕುಳಮರ್ವ ಉಪಸ್ಥಿತರಿದ್ದರು.

* ಡಾ॥ ಪ್ರಭಾಕರ ಭಟ್ ಕಲ್ಲಡ್ಕ, ಕುಟುಂಬ ಪ್ರಬೋಧನ್ ಪ್ರಮುಖರಾದ ಗಜಾನನ ಪೈ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರಾದ ಸು.ರಾಮಣ್ಣ, ಡಾ ಕಮಲ ಪ್ರ.ಭಟ್ ಇವರಿಂದ ಮಾರ್ಗದರ್ಶನ.



* ನವದಂಪತಿಗಳನ್ನು ಕಾಲು ತೊಳೆದು, ಆರತಿ ಬೆಳಗಿ, ಅರಶಿನ, ಕುಂಕುಮ ಹಚ್ಚಿ, ವೇದಘೋಷದೊಂದಿಗೆ ಸ್ವಾಗತಿಸಲಾಯಿತು.
* ತುಳಸಿ ಗಿಡಕ್ಕೆ ನೀರೆರೆದು ನವದಂಪತಿ ಸಮಾವೇಶವನ್ನು ಉದ್ಘಾಟಿಸಿದರು.
* ತಳಿರು–ತೋರಣ, ತೆಂಗಿನ ಗರಿಗಳು ಮತ್ತು ಬಾಳೆ ಎಲೆಗಳಿಂದ ನಿರ್ಮಿಸಿದ ಹಸಿರು ವೇದಿಕೆ ಗಮನಸೆಳೆಯಿತು.
* ಮಾತೆಯರು ಸಮವಸ್ತ್ರ ಧರಿಸಿ ಸ್ವಯಂಸೇವಕರಾಗಿ ಸಂಪೂರ್ಣ ವ್ಯವಸ್ಥೆಯನ್ನು ನಿರ್ವಹಿಸಿದುದು ವಿಶೇಷವಾಗಿತ್ತು.
* ಶ್ರೀ ಬಿ. ನಾರಾಯಣ ಸೋಮಯಾಜಿ, ಶ್ರೀ ರಮೇಶ್ ಎನ್, ಶ್ರೀ ಸುಬ್ರಾಯ ನಂದೋಡಿ (ಕುಟುಂಬ ಪ್ರಬೋಧನ್ ಪ್ರಾಂತ ಪ್ರಮುಖ್), ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

## ಪ.ಪೂ ವಿದ್ಯಾರ್ಥಿನಿಯರ ಉತ್ಥಾನ ಶಿಬಿರ 25.10.23 – 29.10.23




ಶ್ರೀ ದಾಮೋದರ ನೆತ್ತರಕೆರೆ ಇವರು ಬಾಲಗೋಕುಲ ಪರಿಚಯ, ಶ್ರೀಮತಿ ಆಶಾ ಬೆಳ್ಳಾರೆ ಕಥಾ ಅವಧಿ, ಕು. ಕೀರ್ತಿ, ಕು. ಮನೀಷ, ಶ್ರೀಮತಿ ಶೋಭ, ಕು. ಶ್ರೀಮತಿ, ಕು.ಚೈತ್ರ, ಕು.ದಿವ್ಯ ಇವರು ಬಾಲಗೋಕುಲ ಪ್ರಾತ್ಯಕ್ಷಿಕ ಅವಧಿ, ದಿಶಾ ಭಾರತ್ AHEAD ಸಂಸ್ಥೆ ಬೆಂಗಳೂರು ಇದರ ಸದಸ್ಯರಾದ ಶ್ರೀಮತಿ ಕೀರ್ತಿ, ಶ್ರೀ ಸಂದೇಶ್, ಶ್ರೀ ವಿನಾಯಕ್, ಕು. ಐಶ್ವರ್ಯ ಮತ್ತು ಕು. ವರ್ಷ ಇವರಿಂದ ವಿವಿಧ ಅವಧಿಗಳು, ಕು ಶಿಲ್ಪ ಇವರು ಅನೌಪಚಾರಿಕ, ಶ್ರೀಮತಿ ಸುಧಾ ಕಶೆಕೋಡಿ ನಡವಳಿಕಾ ಶಿಕ್ಷಣ, ಡಾ। ಪ್ರಭಾಕರ್ ಭಟ್ ಕಲ್ಲಡ್ಕ ದೇಶದ ಮುಂದಿರುವ ಸವಾಲುಗಳು ಮತ್ತು ಪರಿಹಾರಗಳು ಬೌದ್ಧಿಕ್ ಅವಧಿಗಳನ್ನು, ನಡೆಸಿಕೊಟ್ಟರು. ಸಮಾರೋಪದಲ್ಲಿ ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಉಪಸ್ಥಿತರಿದ್ದು ಮಾರ್ಗದರ್ಶನ ಮಾಡಿದರು. ದೀಪಪೂಜನ್ ಹಾಗೂ ಘೋಷ್ ಸಹಿತ ಪಥಸಂಚಲನ ನಡೆಯಿತು.

## ಪ್ರೌಢಶಾಲಾ ಬಾಲಕಿಯರ ಬಾಲಿಕಾ ಶಿಬಿರ 25.10.2023–27.10.2023




ಈ ಎರಡೂ ಶಿಬಿರಗಳ ಉದ್ಘಾಟನೆಯನ್ನು ನಿವೃತ್ತ ಸ.ಪ.ಪೂ ಕಾಲೇಜು ಸಜಿಪಮೂಡ ಪ್ರಭಾರ ಪ್ರಾಂಶುಪಾಲರು ಶ್ರೀಮತಿ ಜಯಲಕ್ಷ್ಮಿ ಪಿ ಎನ್ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ವಹಿಸಿದ್ದರು. ವೇದಿಕೆಯಲ್ಲಿ ರಾ.ಸೇ.ಸಮಿತಿ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಕಮಲ ಪ್ರ.ಭಟ್, ಸಂಚಾಲಕರು ಶ್ರೀ ವಸಂತ ಮಾಧವ, ಸಹಸಂಚಾಲಕರು ಶ್ರೀ ರಮೇಶ್, ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ್ ಎಂ, ಪ್ರಾಂಶುಪಾಲರು ಶ್ರೀ ವಸಂತ ಬಲ್ಲಾಳ್, ಸೆಕೆಂಡರಿ ಸ್ಕೂಲ್ ಉಪಪ್ರಾಂಶುಪಾಲರು ಶ್ರೀ ತಿರುಮಲೇಶ್ವರ್ ಪ್ರಶಾಂತ್ ಉಪಸ್ಥಿತರಿದ್ದರು. ಮೂರು ದಿನಗಳ ಶಿಬಿರದಲ್ಲಿ ಬಾಲಕಿಯರಿಗೆ ವ್ಯಕ್ತಿತ್ವ ವಿಕಸನ, ಸೈಬರ್ ಸುರಕ್ಷೆ, ವೈಯಕ್ತಿಕ ನಡವಳಿಕೆಗಳು, ಬೌದ್ಧಿಕ, ಶಾರೀರಿಕ ಶಿಕ್ಷಣ ನೀಡಲಾಯಿತು.

**ಪ್ರವಾಸ 9.10.2023**

ಶ್ರೀಗಣೇಶ ಶಿಶು ಮಂದಿರ ಬೊಂಡಾಲದ ವತಿಯಿಂದ ಕದ್ರಿ, ಮಂಗಳಾದೇವಿ, ಕುದ್ರೋಳಿ, ದೇವಸ್ಥಾನಕ್ಕೆ ಪ್ರವಾಸ ಹಮ್ಮಿಕೊಳ್ಳಲಾಯಿತು. 11 ಮಕ್ಕಳು ಭಾಗವಹಿಸಿದ್ದರು.

## ಪ್ರಾಥಮಿಕ ಶಾಲೆ

**ರಾಷ್ಟ್ರ ಮಟ್ಟಕ್ಕೆ ಆಯ್ಕೆ : 2.10.2023**

ಅಕ್ಟೋಬರ್ 1 ಮತ್ತು 2ರಂದು ಆಂಧ್ರಪ್ರದೇಶದ ವಿಜ್ಞಾನ ವಿಹಾರ ಆಂಗ್ಲಮಾಧ್ಯಮ ಶಾಲೆ, ಹೈದರಾಬಾದ್ ಇಲ್ಲಿ ನಡೆದ ಕ್ಷೇತ್ರೀಯ ಗಣಿತ – ವಿಜ್ಞಾನ ಹಾಗೂ ಸಂಸ್ಕೃತಿ ಮಹೋತ್ಸವ ಸ್ಪರ್ಧೆಯಲ್ಲಿ ಬಾಲವರ್ಗದ ಗಣಿತ ಮಾದರಿ ಪ್ರದರ್ಶನದಲ್ಲಿ 6ನೇ ತರಗತಿಯ ಭೂಮಿಕಾ, ರಾಜೇಶ್ವರಿ ಭಟ್ ಪ್ರಥಮ ಸ್ಥಾನ, ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ 7ನೇ ತರಗತಿಯ ಪ್ರಜ್ಞಾ, ಸಾನ್ವಿ ಕಾಮತ್, ವೈಷ್ಣವಿ ಕಡ್ಯ ಪ್ರಥಮ ಸ್ಥಾನ, ಮಳೆ ನೀರು ಸಂರಕ್ಷಿತ ಆಧಾರಿತ ಪ್ರತಿರೂಪ ಎಂಬ ವಿಷಯದಲ್ಲಿ 7ನೇ ತರಗತಿಯ ಅಮೂಲ್ಯ ಡಿ.ಎಸ್ ಮತ್ತು 6ನೇ ತರಗತಿಯ ಶ್ರೀನಿಧಿ ಪ್ರಥಮ ಸ್ಥಾನ ಪಡೆದು, ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

**ಸ್ವಚ್ಚತಾ ಹಿ ಸೇವಾ ಅಭಿಯಾನ : 2.10.2023**

ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮದಿನಾಚರಣೆಯ ಪ್ರಯುಕ್ತ ಅಧ್ಯಾಪಕ ವೃಂದದವರು ಶಾಲಾ ಆವರಣವನ್ನು, ವಿದ್ಯಾರ್ಥಿಗಳೆಲ್ಲರೂ ಪೋಷಕರ ಜೊತೆಗೂಡಿ ತಮ್ಮ ಮನೆಯ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿದರು.

**ರಾ. ವನ್ಯಜೀವಿ ಸಂರಕ್ಷಣಾ ಸಪ್ತಾಹ: 6.10.23**

ಶ್ರೀ ರವಿರಾಜ್ ಕಣಂತೂರುರವರು ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. ವಿದ್ಯಾರ್ಥಿಗಳಿಗೆ ಪ್ರಬಂಧ, ಚಿತ್ರಕಲೆ, ಕವನ ರಚನೆ, ಚರ್ಚಾ ಸ್ಪರ್ಧೆಯನ್ನು ನಡೆಸಲಾಯಿತು.

**ತಾಲೂಕು ಮಟ್ಟಕ್ಕೆ ಆಯ್ಕೆ : 6 ಮತ್ತು 7**

ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದಲ್ಲಿ 200ಮೀ. ಮತ್ತು 100ಮೀ. ಓಟ ಹಾಗೂ ಉದ್ದ ಜಿಗಿತ ಸ್ಪರ್ಧೆಯಲ್ಲಿ 7ನೇ ತರಗತಿಯ ಶ್ರೇಯಾಂಕ್ ಶೆಟ್ಟಿ ಪ್ರಥಮ ಸ್ಥಾನ ಪಡೆದು ವೈಯಕ್ತಿಕ ಚಾಂಪಿಯನ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. 7ನೇ ತರಗತಿಯ ಚಿಂತನ್ 600ಮೀ ಮತ್ತು 400 ಮೀ ಓಟದಲ್ಲಿ, ಗುರುನಂದನ್ ರೈ ಅಡೆತಡೆ ಓಟದಲ್ಲಿ, ರಮ್ಯ ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನ, ಸಾನ್ವಿ ಅಡೆತಡೆ ಓಟದಲ್ಲಿ ಪ್ರಥಮ ಹಾಗೂ ಉದ್ದ ಜಿಗಿತದಲ್ಲಿ ದ್ವಿತೀಯ ಸ್ಥಾನ, ಭವಿಷ್ ಅರಸ್ ಚಕ್ರ ಎಸೆತದಲ್ಲಿ ದ್ವಿತೀಯ, ಸಂಕೀರ್ತ್ ಶೆಟ್ಟಿ ತೃತೀಯ, ಜನನಿ 400ಮೀ ಓಟದಲ್ಲಿ ತೃತೀಯ, ಅಡೆತಡೆ ಓಟದಲ್ಲಿ ಶ್ರೇಯಾ ತೃತೀಯ ಸ್ಥಾನ ಪಡೆದು–ಕೊಂಡಿದ್ದಾರೆ. ಬಾಲಕರ ರಿಲೇ ತಂಡವು ದ್ವಿತೀಯ ಸ್ಥಾನದೊಂದಿಗೆ ಸಮಗ್ರ ಪ್ರಶಸ್ತಿಯನ್ನು ಕೂಡ ತನ್ನದಾಗಿಸಿಕೊಂಡಿದೆ.

**ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ : 7.10.23**

ಭಜನೆ ಹಾಗೂ ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನು ಹಾಗೂ ವನ್ಯ ಜೀವಿ ಸಂರಕ್ಷಣಾ ಸಪ್ತಾಹದ ಅಂಗವಾಗಿ ನಡೆದ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ, ಮುಖ್ಯಮಂತ್ರಿಗಳ 2023ನೇ ಸಾಲಿನ ಚಿನ್ನದ ಪದಕ ಪಡೆದ, ದ.ಕ ಜಿಲ್ಲೆಯ, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಶ್ರೀ ಭರತ್ ಕುಮಾರ್ ಅವರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್, ಶ್ರೀ ದಿನೇಶ್ ಅಮ್ಟೂರು, ಪುತ್ತೂರು ತತ್ವ ಸ್ಕೂಲ್ ಆಫ್ ಆರ್ಟ್ಸ್‌ನ ನಿರ್ದೇಶಕ ಶ್ರೀ ಟೀಲಾಕ್ಷ, ಶ್ರೀ ರಾಜೇಶ್, ಯಕ್ಷಗಾನ ತರಬೇತುದಾರ ಶ್ರೀ ಗಣೇಶ್ ಮಾಣಿಲ, ಶ್ರೀ ಉಮೇಶ್ ಕುಲಕರ್ಣಿ ಉಪಸ್ಥಿತರಿದ್ದರು.

**ಗಿಡ ವಿತರಣೆ : 9.10.2023**

ಪರಿಸರ ಸಂಘ ವಿದ್ಯಾರ್ಥಿಗಳು ನೆಟ್ಟು ಬೆಳೆಸಿದ ಔಷಧ ಗಿಡಗಳನ್ನು ಮುಖ್ಯೋಪಾಧ್ಯಾಯರು "ಮನೆಗೊಂದು ಔಷಧ ಗಿಡ" ಅಭಿಯಾನದ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಿದರು.

**ಬೌದ್ಧಿಕ ಸ್ಪರ್ಧೆಗಳು : 10 ರಿಂದ 12**

ಪಂಚಕೋಶಗಳಿಗೆ ಸಂಬಂಧಿಸಿದ ವಾಸನೆ ಗ್ರಹಿಕೆ, ಶಬ್ದ ಗ್ರಹಿಕೆ, ರುಚಿ ಗ್ರಹಿಕೆ, ಬುದ್ಧಿಮತ್ತೆಗೆ ಸಂಬಂಧಿಸಿ ಸ್ಮರಣ ಶಕ್ತಿ, ಸ್ಪಷ್ಟ ಉಚ್ಚಾರ, ಪ್ರಬಂಧ, ಎಲೆ ಗುರುತಿಸುವಿಕೆ, ಆಶುಭಾಷಣ, ಛದ್ಮವೇಷ, ಮುಖವರ್ಣಿಕೆ, ಹೂ ಕಟ್ಟುವುದು, ಬೆಂಕಿ ಇಲ್ಲದ ಅಡುಗೆ ಇತ್ಯಾದಿ ಬೌದ್ಧಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

**ATLಗೆ ಭೇಟಿ : 10.10.2023**

ATLಗೆ ವಿದ್ಯಾರ್ಥಿಗಳು ಭೇಟಿ ನೀಡಿದಾಗ ರೋಹಿಣಿ ಮಾತಾಜಿ ಮಾಹಿತಿ ನೀಡಿದರು. ವಿವಿಧ

**ಸ್ಪರ್ಧೆಗಳು : 12.10.23**

ಶಾಂತಿವನ ಟ್ರಸ್ಟ್ ನಡೆಸುವ ಜ್ಞಾನ ಶರಧಿ ಎಂಬ ಪುಸ್ತಕ ಆಧಾರಿತ ಚಿತ್ರಕಲೆ, ಭಾಷಣ ಹಾಗೂ ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸಲಾಯಿತು.

**ಆರೋಗ್ಯ ಮಾಹಿತಿ : 12.10.2023**

ಬಾ.ಆ.ಕೇಂದ್ರದ ವೈದ್ಯರಾದ ಡಾ। ರೋಶಿನಿ ಹದಿಹರೆಯದಲ್ಲಿನ ಹೆಣ್ಣು ಮಕ್ಕಳ ಸಮಸ್ಯೆ ಹಾಗೂ ಅದರ ಪರಿಹಾರದ ಬಗ್ಗೆ ಮಾಹಿತಿ ನೀಡಿದರು. ಬಾ.ಆ.ಕೇಂದ್ರದ ಶುಶ್ರೂಷಕಿ ಸರಸ್ವತಿ, ಮಾತೃಭಾರತಿ ಸಮಿತಿಯ ಅಧ್ಯಕ್ಷರಾದ ಲತಾ ಹಾಗೂ ಉಪಾಧ್ಯಕ್ಷರಾದ ರಂಜಿನಿ, ಕಾರ್ಯದರ್ಶಿ ಸುಚಿತ್ರ, ಸದಸ್ಯರಾದ ಸುಷ್ಮಾ, ಜ್ಯೋತಿ, ಹಿರಿಯ ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಉಪಸ್ಥಿತರಿದ್ದರು.

**ತಾ.ದೈ.ಶಿ ಪರಿವೀಕ್ಷಣಾಧಿಕಾರಿ ಭೇಟಿ: 25.10.23**

ಬಂ.ತಾ. ದೈಹಿಕ ಶಿಕ್ಷಣ ಪರಿವೀಕ್ಷಣಾಧಿಕಾರಿಯಾದ ಶ್ರೀ ವಿಷ್ಣು ಹೆಬ್ಬಾರ್ ಶಾಲೆಗೆ ಭೇಟಿ ನೀಡಿ, ಮೈಸೂರು ವಿಭಾಗ ಮಟ್ಟದಲ್ಲಿ ಭಾಗವಹಿಸುವ ಕಬಡ್ಡಿ ಕ್ರೀಡಾಪಟುಗಳನ್ನು ಮಾತಾನಾಡಿಸಿದರು.

**ತಾಲೂಕಿನಲ್ಲಿ ಸಮಗ್ರ : 27.10.2023**

ಶಿ.ಇಲಾಖೆ ವತಿಯಿಂದ ನಡೆದ ತಾ. ಮಟ್ಟದ ಕ್ರೀಡಾಕೂಟದಲ್ಲಿ 7ನೇ ತರಗತಿಯ ಶ್ರೇಯಾಂಕ್ 100ಮೀ. ಓಟ ಮತ್ತು ಉದ್ದ ಜಿಗಿತ ಸ್ಪರ್ಧೆಯಲ್ಲಿ ಪ್ರಥಮ, 200ಮೀ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ವೈಯಕ್ತಿಕ ಚಾಂಪಿಯನ್ ಪ್ರಶಸ್ತಿಗೆ, 7ನೇ ತರಗತಿಯ ಚಿಂತನ್ 600ಮೀ ಓಟದ ಸ್ಪರ್ಧೆಯಲ್ಲಿ ದ್ವಿತೀಯ, 7ನೇ ತರಗತಿಯ ಸಾನ್ವಿ ಹಾಗೂ ಗುರುನಂದನ್ ರೈ ಅಡೆತಡೆ ಓಟದಲ್ಲಿ ದ್ವಿತೀಯ, ಬಾಲಕರ ರಿಲೇ ತಂಡವು ತೃತೀಯ ಸ್ಥಾನದೊಂದಿಗೆ ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

**ರಾಜ್ಯ ಮಟ್ಟಕ್ಕೆ ಆಯ್ಕೆ: 31.10.2023**

ಸಾ.ಶಿ.ಇ ವತಿಯಿಂದ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ 7ನೇ ತರಗತಿಯ ಶ್ರೇಯಾಂಕ್, ಉದ್ದ ಜಿಗಿತದಲ್ಲಿ ದ್ವಿತೀಯ ಹಾಗೂ 100ಮೀ. ಓಟದಲ್ಲಿ ತೃ.ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆ.

## ಪ್ರೌಢಶಾಲೆ

**ಸ್ವಚ್ಛ ಭಾರತ ದಿವಸ 2.10.2023**

ಮಹಾತ್ಮ ಗಾಂಧೀಜಿ ಮತ್ತು ಲಾಲ್ ಬಹದ್ದೂರು ಶಾಸ್ತ್ರಿ ಜನ್ಮದಿನಾಚರಣೆಯಲ್ಲಿ ಮಾತಾಜಿಯವರಾದ ಚೈತ್ರ ಮತ್ತು ಮೇಘಶ್ರೀ ಇವರು ಮಹನೀಯರ ಜೀವನ ಚರಿತ್ರೆಯ ಬಗ್ಗೆ ಮಾತನಾಡಿದರು. ನಂತರ ಪ್ರೌಢಶಾಲಾ ಗ್ರಾಮವನಕ್ಕೆ ಭೇಟಿ ನೀಡಿ ಅಧ್ಯಾಪಕರಿಂದ ಸ್ವಚ್ಛತಾ ಕಾರ್ಯ ಮಾಡಲಾಯಿತು.

**ಜ್ಞಾನ–ವಿಜ್ಞಾನ ಮೇಳ 2.10.2023**

ವಿದ್ಯಾಭಾರತಿ ಕ್ಷೇತ್ರೀಯ ಮಟ್ಟದ ಗಣಿತ ವಿಜ್ಞಾನ ಮೇಳ–ಸಂಸ್ಕೃತಿ ಮಹೋತ್ಸವ ಸ್ಪರ್ಧೆಯಲ್ಲಿ ಮೋಡಲ್ ಬೇಸ್‌ಡ್ ಓನ್ ಮೋಷನ್ ಎಂಬ ವಿಷಯದಲ್ಲಿ ಆಕಾಶ್ ಪ್ರಥಮ, ಮೋಡಲ್ ಬೇಸ್‌ಡ್ ಓನ್ ಮೂವಿಂಗ್ ವಿಷಯದಲ್ಲಿ ದೃತಿ–ದ್ವಿತೀಯ ಸ್ಥಾನ ಪಡೆದರು.

**ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟ 6.10.23**

ಸಾ.ಶಿ.ಇಲಾಖೆ, ಬಾಲವಿಕಾಸ ಆಂಗ್ಲಮಾಧ್ಯಮ ಶಾಲೆ ಮಾಣಿ ಇಲ್ಲಿ ನಡೆಸಿದ ಕಲ್ಲಡ್ಕ ವಲಯ ಮಟ್ಟದ ಕ್ರೀಡಾಕೂಟದಲ್ಲಿ 17 ರ ವಯೋಮಾನದ ಬಾಲಕರ ವಿಭಾಗದಲ್ಲಿ ಆಶ್ಲೇಷ (9ದೇ)–1500 ಮೀ ದ್ವಿತೀಯ, ದೀವಿತ್ (10ದು)– 800ಮೀ ದ್ವಿತೀಯ, ಪ್ರಥಮ್ (10ಚ)–ಎತ್ತರ ಜಿಗಿತ ದ್ವಿತೀಯ, ಪ್ರಜ್ವಲ್ (10ಭ)–ಎತ್ತರ ಜಿಗಿತ ತೃತೀಯ, 17 ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಅನ್ವಿ (10ಭ)–ಎತ್ತರ ಜಿಗಿತ ಪ್ರಥಮ, ಸಿಂಚನ (10ಭ) 100ಮೀ ದ್ವಿತೀಯ, ಕವನ(10ಭ)–800ಮೀ ತೃತೀಯ, 14 ರ ವಯೋಮಾನದ ಬಾಲಕರ ವಿಭಾಗದಲ್ಲಿ, ಸಾತ್ವಿಕ್ ಜಿ.ಶೆಟ್ಟಿ(8ಏ)–ಚಕ್ರಎಸೆತ–ಪ್ರಥಮ, ಶ್ರೇಯಸ್(8ಏ)–ಎತ್ತರ ಜಿಗಿತ ಪ್ರಥಮ, ಭವಿಷ್ (8ನ)–ಎತ್ತರ ಜಿಗಿತ ತೃತೀಯ, 14ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ, ದಿಶಾಲಿ(8ಏ)–100ಮೀ ಪ್ರಥಮ ಬಹುಮಾನವನ್ನು ಪಡೆದುಕೊಂಡಿದ್ದಾರೆ. ಆಶ್ಲೇಷ್ (9ದೇ)–ತ್ರಿವಿಧ ಜಿಗಿತ ದ್ವಿತೀಯ ಹಾಗೂ 17 ರ ವಯೋಮಾನದ ಬಾಲಕರು 4*100 ಮೀ ರಿಲೇ ತೃತೀಯ (ಆಶ್ಲೇಷ್, ಆದಿತ್ಯ, ನಿಶಾಂತ್, ದೀವಿತ್) 17 ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಕವನ(10ಭ)–3000 ಮೀ ಪ್ರಥಮ, ನಿಖಿತಾ (10ದು)ತ್ರಿವಿಧ ಜಿಗಿತ ಪ್ರಥಮ, ಉದ್ದ ಜಿಗಿತ ದ್ವಿತೀಯ, ಸಿಂಚನ (10ಭ)–200ಮೀ ದ್ವಿತೀಯ, ಅನ್ವಿ(10ಭ)–ಅಡೆತಡೆ ಓಟ ಪ್ರಥಮ, 1500ಮೀ. ತೃತೀಯ ಹಾಗೂ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿಯನ್ನು ಪಡೆದಿರುತ್ತಾಳೆ. 17 ವಯೋಮಾನದ

ಬಾಲಕಿಯರ ತಂಡವು 4*100ಮೀ. ರಿಲೇ ಪ್ರಥಮ (ಅನ್ವಿ, ಸಿಂಚನ, ನಿಖಿತಾ, ಕವನ), 14ರ ವಯೋಮಾನದ ಬಾಲಕರ ವಿಭಾಗದಲ್ಲಿ, ಭವಿಶ್ (8ನ)–200ಮೀ ಪ್ರಥಮ, ಉದ್ದ ಜಿಗಿತ ತೃತೀಯ, ಶ್ರೇಯಸ್–(8ಏ)ಅಡೆತಡೆ ಓಟ ಪ್ರಥಮ, ಶ್ರವಣ್–(8ನ) 200ಮೀ ತೃತೀಯ, ಹಾಗೂ ಶ್ರೇಯಸ್ ವೈಯಕ್ತಿಕ ಚಾಂಪಿಯನ್ ಪ್ರಶಸ್ತಿ ಜೊತೆಗೆ 14 ರ ವಯೋಮಾನದ ಬಾಲಕರ ತಂಡವು ಸಮಗ್ರ ಪ್ರಶಸ್ತಿಯನ್ನು ಪಡೆದುಕೊಂಡಿರುತ್ತಾರೆ. 14ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ, ದಿಶಾಲಿ–(8ಏ) ಅಡೆತಡೆ ಓಟ ಪ್ರಥಮ, ಪ್ರೇಕ್ಷ–(8ನ), 200ಮೀ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ. ಚಿನ್ನ– 11, ಬೆಳ್ಳಿ–7, ಕಂಚು–8, 26 ಪದಕಗಳನ್ನು ಪಡೆದಿರುತ್ತಾರೆ.

**ರಕ್ತದ ವರ್ಗೀಕರಣ 12.10.2023**

ಹೊಸದಾಗಿ ಸೇರಿದ ವಿದ್ಯಾರ್ಥಿಗಳ ರಕ್ತದ ಗುಂಪಿನ ವರ್ಗೀಕರಣವನ್ನು ಪ್ರೌಢಶಾಲಾ ವಿದ್ಯಾರ್ಥಿಗಳು ಮಾಡಿದರು.

**ತಾಲೂಕು ಮಟ್ಟದ ಕ್ರೀಡಾಕೂಟ ಬಂಟ್ವಾಳ ಮಂಗಳ ಸ್ಟೇಡಿಯಂ 26.10.2023**

ಬಂಟ್ವಾಳ ಮಂಗಳ ಕ್ರೀಡಾಂಗಣದಲ್ಲಿ ಎರಡು ದಿನಗಳ ಕಾಲ ನಡೆದ ಕ್ರೀಡಾಕೂಟದಲ್ಲಿ 17 ರ ವಯೋಮಾನದ ಬಾಲಕರ ವಿಭಾಗದಲ್ಲಿ ಆಶ್ಲೇಷ್ (9ನೇ ದೇವಶಿಲ್ಪಿ) – 1500 ಓಟದಲ್ಲಿ ದ್ವಿತೀಯ ಸ್ಥಾನ 17 ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಅನ್ವಿ (10ನೇ ಭರತ), ಎತ್ತರ ಜಿಗಿತದಲ್ಲಿ ಪ್ರಥಮ, 100ಮೀ ಓಟದಲ್ಲಿ ದ್ವಿತೀಯ ಸ್ಥಾನ, 14 ರ ವಯೋಮಾನದ ಬಾಲಕರ ವಿಭಾಗದಲ್ಲಿ ಶ್ರೇಯಸ್ (8ನೇ ಏ)–80ಮೀ ಅಡೆತಡೆ ಓಟದಲ್ಲಿ ಪ್ರಥಮ, 14ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ದಿಶಾಲಿ(8ನೇ ಕ)–80 ಮೀ ಅಡೆತಡೆ ಓಟದಲ್ಲಿ ಪ್ರಥಮ ಸ್ಥಾನವವನ್ನು ಪಡೆದುಕೊಂಡಿದ್ದಾರ. ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹತೆಯನ್ನು ಪಡೆದುಕೊಂಡಿದ್ದಾರೆ.

**ಈಜು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ 28.10.2023**

ರಾಷ್ಟ್ರೋತ್ಥಾನ ವಿದ್ಯಾಸಂಸ್ಥೆ ಬನಶಂಕರಿ ಬೆಂಗಳೂರಿನಲ್ಲಿ ನಡೆದ ವಿದ್ಯಾಭಾರತಿ ರಾಷ್ಟ್ರಮಟ್ಟದ ಮೀ ಬಟರ್ ಫ್ಲೈ ಈಜು ಸ್ಪರ್ಧೆಯಲ್ಲಿ ಅನರ್ಘ್ಯ ಪ್ರಥಮ ಸ್ಥಾನವನ್ನು ಪಡೆದು ಎಸ್.ಜಿ.ಎಫ್.ಐಗೆ ಆಯ್ಕೆಯಾಗಿದ್ದಾಳೆ.

**ಜಿಲ್ಲಾ ಮಟ್ಟದಲ್ಲಿ ಬೆಳ್ಳಿಪದಕ 31.10.2023**

ಸ್ವರಾಜ್ಯ ಮೈದಾನ ಮೂಡಬಿದಿರೆಯಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ 14ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ದಿಶಾಲಿ (8ಕ) ದ್ವಿತೀಯ ಸ್ಥಾನ ಪಡೆದಿರುತ್ತಾಳೆ.

## ಸೆಕೆಂಡರಿ ಸ್ಕೂಲ್

**ರಾಷ್ಟ್ರಮಟ್ಟಕ್ಕೆ ಆಯ್ಕೆ. 07.10.2023**

ಶ್ರೀ ಸರಸ್ವತಿ ಧಾಮದಲ್ಲಿ ನಡೆದ ವಿದ್ಯಾಭಾರತಿ ಖೇಲ್ ಕ್ರೀಡಾಕೂಟದಲ್ಲಿ ಸೆಕೆಂಡರಿ ಸ್ಕೂಲ್‌ನ ವೆಂಕಟ್ ವೈದ್ಯನಾಥನ್–ಈಟಿ ಎಸೆತದಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿರುತ್ತಾನೆ.

**ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ತೃತೀಯ 30.10.23**

ಮಧ್ಯಪ್ರದೇಶದ ದೇವಾಸ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ರಕ್ಷಿತ್ ಭಾಗವಹಿಸಿ ತೃತೀಯ ಸ್ಥಾನ ಪಡೆದುಕೊಂಡಿರುತ್ತಾನೆ.

## ಪದವಿಪೂರ್ವ

**ಕ್ಷೇತ್ರಮಟ್ಟದ ಗಣಿತ–ವಿಜ್ಞಾನ ಮೇಳ 02.10.23**

ವಿಜಯವಾಡದ ವಿಜ್ಞಾನ ವಿಹಾರ ವಿದ್ಯಾಲಯದಲ್ಲಿ ನಡೆದ ಕ್ಷೇತ್ರ ಮಟ್ಟದ ಗಣಿತ–ವಿಜ್ಞಾನ ಮೇಳದಲ್ಲಿ ತಿಲಕ್, ಶರಣ್ ಶೆಟ್ಟಿ, ಹಾಗೂ ಸಂಸ್ಕೃತಿ ಜ್ಞಾನ ರಸಪ್ರಶ್ನೆಯಲ್ಲಿ ದೀಕ್ಷಿತ್, ತುಷಾರ್ ಹಾಗೂ ಶ್ರೀನಿವಾಸ್ ನಾಯಕ್ ಇವರ ತಂಡವು ಪ್ರಥಮ ಸ್ಥಾನ ಪಡೆದು ರಾಷ್ಟ್ರ ಮಟ್ಟದ ಸ್ಪರ್ಧೆಗೆ ಅರ್ಹತೆಯನ್ನು ಪಡೆದಿರುತ್ತಾರೆ.

**ರಾಷ್ಟ್ರಮಟ್ಟದ ಕಬಡ್ಡಿ 12.10.23**

ಉತ್ತರಪ್ರದೇಶದ ಪತೇಪುರದಲ್ಲಿ ನಡೆದ ವಿದ್ಯಾಭಾರತೀಯ ರಾಷ್ಟ್ರಮಟ್ಟದ ಕಬಡ್ಡಿಯಲ್ಲಿ ಕು. ದೀಪ್ತಿ ಮತ್ತು ಕು.ರಕ್ಷಾ ಪ್ರಥಮ ಸ್ಥಾನ ಪಡೆದು S.G.F.I ಗೆ ಆಯ್ಕೆಯಾಗಿದ್ದಾರೆ

**ಸಾಮೂಹಿಕ ಹುಟ್ಟುಹಬ್ಬ ಆಚರಣೆ 13.10.2023**

ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮತ್ತು ನಿಧಿ ಸಮರ್ಪಣೆ ಮಾಡಿ ಮಾತಾಜಿಗಳಿಂದ ತಿಲಕ ಧಾರಣೆ ಮತ್ತು ಆರತಿ ಬೆಳಗಿಸಿಕೊಂಡು ಆಶೀರ್ವಾದ ಪಡೆದರು.

**ತಾಲೂಕು ಮಟ್ಟದ ಕಬಡ್ಡಿ–ಪ್ರಥಮ 16.10.23**

ಪ.ಪೂ.ಶಿಕ್ಷಣ ಇಲಾಖೆ ದ.ಕ ಜಿಲ್ಲೆ ಹಾಗೂ ಸ. ಪ.ಪೂರ್ವ ಕಾಲೇಜು ನಾರ್ಶ ಮೈದಾನ ಇದರ ಜಂಟಿ ಆಶ್ರಯದಲ್ಲಿ ನಡೆದ ಬಂ. ತಾ. ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಬಾಲಕರ ಮತ್ತು ಬಾಲಕಿಯರ ತಂಡ ಜಿಲ್ಲಾ ಮಟ್ಟಕ್ಕೆ ಆಯ್ಕೆ.

**ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಪ್ರಥಮ**

ಮಧ್ಯಪ್ರದೇಶದ ದೇವಾಸ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ದ್ವಿವಿಜ್ಞಾನ ವಿಭಾಗದ ಅರುಣ್ ಪ್ರಥಮ ಸ್ಥಾನ ಪಡೆದು SGFIಗೆ ಆಯ್ಕೆಯಾಗಿರುತ್ತಾನೆ. ದ್ವಿತೀಯ ವಿಜ್ಞಾನ ವಿಭಾಗದ ಮನೀಷ್ ತೃತೀಯ ಸ್ಥಾನ ಪಡೆದಿರುತ್ತಾನೆ.

**ಅತ್ಲೆಟಿಕ್ಸ್ 31.10.2023**

ಮಂಗಳಾ ಕ್ರೀಡಾಂಗಣದಲ್ಲಿ ನಡೆದ ಬಂ.ತಾ. ಮಟ್ಟದ ಅತ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ವಿಕಾಸ್ ಡಿಸ್ಕಸ್ ತ್ರೋ ಪ್ರಥಮ, ಹ್ಯಾಮರ್ ತ್ರೋ ತೃತೀಯ, ಮೋಕ್ಷಿತ್ 100 ಮೀಟರ್ ಪ್ರಥಮ, 200 ಮೀಟರ್ ದ್ವಿತೀಯ ಸ್ಥಾನ, ಜಯಲಕ್ಷ್ಮೀ 200ಮೀ ತೃತೀಯ, ರಕ್ಷಾ ಜಾವಲೀನ್ ತೃತೀಯ, ದೀಕ್ಷಿತಾ 1500 ಮೀಟರ್ ದ್ವಿತೀಯ, ನಡಿಗೆ ಸ್ಪರ್ಧೆ ದ್ವಿತೀಯ, ಶಿವಾನಿ ಡಿಸ್ಕಸ್ ತ್ರೋ ದ್ವಿತೀಯ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಬಾಲಕರ ರಿಲೇ ತಂಡವು 4X100ಮೀಟರ್ ಮತ್ತು 4X4ಮೀಟರ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದೆ. 4X100ಮೀಟರ್ ದ್ವಿತೀಯ ಸ್ಥಾನ ಪಡೆದಿದ್ದಾರೆ.

**ಚೆಸ್ 30.10.2023**

ಅರುಣಾಚಲ ಪ್ರದೇಶದಲ್ಲಿ ನಡೆದ ರಾಷ್ಟ್ರಮಟ್ಟದ ಚೆಸ್ ಪಂದ್ಯಾಟದಲ್ಲಿ ದ್ವಿತೀಯ ವಿಜ್ಞಾನ ವಿಭಾಗದ ಸುಮಿತ್ ಇವರು ಭಾಗವಹಿಸಿರುತ್ತಾರೆ

**ಅ.ಭಾ.ವಿ.ಪರಿಷತ್ ಘಟಕ ಉದ್ಘಾಟನೆ 31.10.23**

ಅ.ಭಾ.ವಿ.ಪರಿಷತ್ ಘಟಕದ ಉದ್ಘಾಟನೆಯನ್ನು ಶ್ರೀ ಶ್ರೀರಾಮ ಅಂಗೀರಸ ಮಂಗಳೂರು ಮತ್ತು ಪುತ್ತೂರು ಜಿಲ್ಲೆ ಸಂಘಟನಾ ಕಾರ್ಯದರ್ಶಿ ಉದ್ಘಾಟಿಸಿ, ಸಂಘಟನೆಯ ಕಾರ್ಯಗಳ ಬಗ್ಗೆ ಮಾರ್ಗದರ್ಶನ ಮಾಡಿದರು. ಮಂಗಳೂರು ವಿದ್ಯಾರ್ಥಿ ಪರಿಷತ್ತಿನ ಕಲಾಮಂಚ್ ಪ್ರಮುಖ್ ಸಮೀಕ್ಷಾ ಉಪಸ್ಥಿತರಿದ್ದರು.

## ಪದವಿ

**ಕೌಶಲ್ಯಾಧಾರಿತ ಕೋರ್ಸುಗಳ ಉದ್ಘಾಟನೆ 05.10.23**

ಆಂತರಿಕ ಗುಣಮಟ್ಟ ಭರವಸಾ ಕೋಶ ಹಾಗೂ ವಾಣಿಜ್ಯ ಸಂಘದ ಸಹಯೋಗದಲ್ಲಿ ಹೊಸದಾಗಿ ಆರಂಭಗೊಂಡ ಬಿಕಾಂ ವಿದ್ ಲಾಜಿಸ್ಟಿಕ್ ಆಂಡ್ ಸಪ್ಲೈ ಚೈನ್ ಮ್ಯಾನೇಜ್ಮೆಂಟ್ ಕೋರ್ಸ್‌ನ್ನು ಸ.ಪ್ರ. ದರ್ಜೆ ಕಾಲೇಜು ಕಾಪು ಇಲ್ಲಿನ ವಾಣಿಜ್ಯ ವಿಭಾಗದ ಸ.ಪ್ರಾಧ್ಯಾಪಕರಾದ ಡಾ. ರೋಶ್ನಿ ಯಶವಂತ್ ಉದ್ಘಾಟಿಸಿ, ಪದವಿಯ ಜೊತೆಗೆ ಇನ್ನಿತರ ಕೌಶಲ್ಯಾಧಾರಿತ ಕೋರ್ಸುಗಳ ಅಗತ್ಯತೆ, ಉದ್ದೇಶ ಹಾಗೂ ಉದ್ಯೋಗಾವಕಾಶದ ಬಗ್ಗೆ ಮಾಹಿತಿ ನೀಡಿದರು. ಡಾ.ಪ್ರಭಾಕರ್ ಭಟ್ ಕಲ್ಲಡ್ಕ, ಸುಕನ್ಯಾ ಮಾತಾಜಿ ಉಪಸ್ಥಿತರಿದ್ದರು.

**ಮಾಹಿತಿ ಶಿಬಿರದಲ್ಲಿ ಭಾಗಿ 06.10.2023**

ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಕಾಲೇಜುಗಳ ಉಪನ್ಯಾಸಕಿ ಹಾಗೂ ಉಪನ್ಯಾಸಕ ವರ್ಗದವರಿಗೆ ಆಯೋಜಿಸಿದ ಒಂದು ದಿನದ ರೋವರಿಂಗ್ ಮತ್ತು ರೇಂಜರಿಂಗ್(Rovering _Rangering) ಮಾಹಿತಿ ಶಿಬಿರದಲ್ಲಿ ಉಪನ್ಯಾಸಕರಾದ ಶ್ರೀ ಧನಂಜಯನ್ ಹಾಗೂ ಕುಧನ್ಯಶ್ರೀ ಮಾತಾಜಿ ಇವರು ಭಾಗವಹಿಸಿರುತ್ತಾರೆ.

**ನುಡಿ ನಮನ ಕಾರ್ಯಕ್ರಮ 16.10.2023**

ವಿದ್ಯಾಕೇಂದ್ರದಲ್ಲಿ 2ನೇ ತರಗತಿಯಿಂದ ಪದವಿವರೆಗೆ ಶಿಕ್ಷಣ ಪಡೆದು, ವಿದ್ಯಾಕೇಂದ್ರವನ್ನೇ ತನ್ನ ಮನೆಯಂತೆ ಭಾವಿಸಿ, ಕ್ರೀಡಾ ವಿಭಾಗದಲ್ಲಿ, ರಾಷ್ಟ್ರಮಟ್ಟದಲ್ಲಿ ವಿದ್ಯಾಕೇಂದ್ರವನ್ನು ಪ್ರತಿನಿಧಿಸಿ, ಎಲ್ಲರ ನೆಚ್ಚಿನ ವಿದ್ಯಾರ್ಥಿಯಾಗಿದ್ದ ಡಯೋ ಬ್ರೈಟ್ ಮಿಟ್ಕರ್ ಇವರು ನಮ್ಮನ್ನ ಅಗಲಿದ್ದಾರೆ. ಇವರ ದಿವ್ಯಾತ್ಮಕ್ಕೆ ಚಿರಶಾಂತಿ ಸಿಗಲೆಂದು ನುಡಿನಮನ ಮತ್ತು ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಲಾಯಿತು.

**ಸ್ವಚ್ಛತೆ, ಗಿಡ ನೆಡುವ ಕಾರ್ಯಕ್ರಮ 16.10.23**

ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರಿಂದ ವಿದ್ಯಾಕೇಂದ್ರದ ಆವರಣದಲ್ಲಿ ಸ್ವಚ್ಛತೆ ಮತ್ತು ಫಲ ಕೊಡುವ ಗಿಡಗಳನ್ನು ನೆಡುವ ಕಾರ್ಯಕ್ರಮ ಆಯೋಜಿಸಲಾಯಿತು.

**ಕೌಶಲ್ಯ ವೃದ್ಧಿ ತರಬೇತಿ 19.10.23**

ಪ್ರಬೋಧ ವಾಣಿಜ್ಯ ಸಂಘ ಹಾಗೂ Placement and training cell ಇದರ ಸಹಯೋಗದಲ್ಲಿ ದ್ವಿ.ಬಿ.ಕಾಂ ವಿದ್ಯಾರ್ಥಿಗಳಿಗೆ ಸಮಯ ನಿರ್ವಹಣೆ ಎಂಬ ವಿಷಯದ ಕುರಿತು ಕೌಶಲ್ಯ ವೃದ್ಧಿ ತರಬೇತಿಯನ್ನು ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ BGS ಪ್ರಥಮ ದರ್ಜೆ ಕಾಲೇಜು, ಕಾಪೂರು ಇಲ್ಲಿನ ಹರಿಣಿ ಪಿ.ಪೂಜಾರಿ ಸಮಯ ನಿರ್ವಹಣೆ ಬಗ್ಗೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.ಶ್ರೀಮತಿ ವಿನುತಾ ಮಾತಾಜಿ, ದೀಕ್ಷಿತಾ ಮಾತಾಜಿ, ಶ್ರೀ ಹರ್ಷಿತ್ ಶ್ರೀಮಾನ್ ಉಪಸ್ಥಿತರಿದ್ದರು.

## ಸಾಂಸ್ಕೃತಿಕ ಕಾರ್ಯಕ್ರಮ 20.10.2023

ಪ್ರದೀಪ್ತ ಸಾಂಸ್ಕೃತಿಕ ಸಂಘದ ಉದ್ಘಾಟನಾ ಸಮಾರಂಭದ ಪ್ರಯುಕ್ತ "ಮಹೋತ್ಸವ ಪ್ರಿಯೇ ಭಾರತಿ" ಸಾಂಸ್ಕೃತಿಕ ಕಾರ್ಯಕ್ರಮವು ಅಂತಿಮ ಪದವಿ ವಿದ್ಯಾರ್ಥಿಗಳಿಂದ ನಡೆಯಿತು. ಭಾರತದ ಹಬ್ಬಗಳ ಕುರಿತಾಗಿ ವಿವಿಧ ಕಾರ್ಯಕ್ರಮಗಳನ್ನು ಪ್ರದರ್ಶಿಸಿದರು. ಸಾಂಸ್ಕೃತಿಕ ಸಂಘದ ನಿರ್ದೇಶಕಿ ಶ್ರೀಮತಿ ಜಯಲಕ್ಷ್ಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಟ್ಲದ R. K ಕಲಾ ಸಂಸ್ಥೆಯ ಶ್ರೀ ರಾಜೇಶ್ ವಿಟ್ಲ ಸಂಘವನ್ನು ಉದ್ಘಾಟಿಸಿದರು. ಸಂಗೀತ ರತ್ನ ರಾಜ್ಯ ಪ್ರಶಸ್ತಿ ವಿಜೇತರಾದ ಶ್ರೀ ಪ್ರವೀಣ್ ಜಯ ವಿಟ್ಲ ಹಾಗೂ ಯಕ್ಷಗಾನ ಹವ್ಯಾಸಿ ಭಾಗವತರಾದ ಶ್ರೀ ಕುಶಾಲಪ್ಪ ಮುರಬೈಲ್ ಉಪಸ್ಥಿತರಿದ್ದರು.

## ರಕ್ತದಾನ ಶಿಬಿರ 21.10.2023

ರಾಷ್ಟ್ರೀಯ ಸೇವಾ ಯೋಜನೆ ಮತ್ತು ರೆಡ್ ಕ್ರಾಸ್ ಘಟಕ ಇದರ ಸಹಯೋಗದೊಂದಿಗೆ 11ನೇ "ಬೃಹತ್ ರಕ್ತದಾನ ಶಿಬಿರವು" ಕಾಲೇಜಿನ ಸಾಧನಾ ಸಭಾಭವನದಲ್ಲಿ ನಡೆಯಿತು. ಡಾ । ಪ್ರಭಾಕರ ಭಟ್ ಕಲ್ಲಡ್ಕ,ಕೆ ಎಂ ಸಿ ಹಾಸ್ಪಿಟಲ್ ಮಂಗಳೂರು ಇದರ ರಕ್ತ ನಿಧಿ ಅಧಿಕಾರಿ ಡಾ। ದಿನೇಶ್, –ಪಾಂಚಜನ್ಯ ಹಿ.ವಿ. ಸಂಘದ ಸದಸ್ಯರು ತಿಲಕ್ ರಾಜ್ ವಿಟ್ಲ, ಓಂ ಶಕ್ತಿ ಫ್ರೆಂಡ್ಸ್ ನ ಅಧ್ಯಕ್ಷರಾದ ಶ್ರೀ ರವಿ ಭಂಡಾರಿ, ಮಣಿಕಂಠ ಭಜನಾ ಮಂದಿರ ಕುದ್ರೆಬೆಟ್ಟು ಅಧ್ಯಕ್ಷರಾದ ಲೋಕಾನಂದ್ ಏಳ್ತಿಮಾರ್, ಆಟೋ ಚಾಲಕ ಸಂಘ ಕಲ್ಲಡ್ಕದ ಸದಸ್ಯರಾದ ಶ್ರೀ ರವೀಂದ್ರ ಸುದೆಕ್ಕಾರ್ ಉಪಸ್ಥಿತರಿದ್ದರು. ಮಂಗಳೂರು ರಾ.ಸೇ.ಯೋಜನೆಯ ಯೋಜನಾಧಿಕಾರಿ ಶ್ರೀ ಯತಿರಾಜ್ ಪಿ., ಸಹ ಯೋಜನಾಧಿಕಾರಿ ದೀಕ್ಷಿತಾ ರೆಡ್ ಕ್ರಾಸ್ ಘಟಕ ದ ನಿರ್ದೇಶಕ ಶ್ರೀದೇವಿ, ಓಂ ಶಕ್ತಿ ಫ್ರೆಂಡ್ಸ್ ಕಲ್ಲಡ್ಕದ ಪ್ರಮುಖರಾದ ರತ್ನಾಕರ ಶೆಟ್ಟಿ ಕಲ್ಲಡ್ಕ, ಹಿ.ವಿ. ಸಂಘದ ಅಧ್ಯಕ್ಷ ರಾಜೇಶ್ ನರಿಂಗಾನ, ಕೋಶಾಧಿಕಾರಿ ಜಗದೀಶ್ ಮುಲಾರ್ ಉಪಸ್ಥಿತರಿದ್ದರು.

## "ಸಿರಿ ಕುರಲ್ ಸಾಂಸ್ಕೃತಿಕ ಸ್ಪರ್ಧೆ 21.10.2023

ಮಠತಬೆಟ್ಟು ಮಹಿಷ ಮರ್ದಿನಿ ಕ್ಷೇತ್ರದಲ್ಲಿ ನವರಾತ್ರಿ ಪ್ರಯುಕ್ತ ಆಯೋಜಿಸಿದ್ದ "ಸಿರಿ ಕುರಲ್" ಎಂಬ ಸಾಂಸ್ಕೃತಿಕ ಸ್ಪರ್ಧೆಯಲ್ಲಿ 43 ವಿದ್ಯಾರ್ಥಿಗಳು ಭಾಗವಹಿಸಿ "ಕೋಟಿ–ಚೆನ್ನಯ "ಕುರಿತಾದ ನೃತ್ಯ ರೂಪಕ, ಭರತನಾಟ್ಯ, ಕಂಗೀಲು, ಹುಲಿ ಕುಣಿತ, ಯಕ್ಷನಾಟ್ಯ, ಹಾಡು ಮುಂತಾದ ಸಾಂಸ್ಕೃತಿಕ ಪ್ರದರ್ಶನವನ್ನು ಪ್ರದರ್ಶಿಸಿದರು.

## ಕೌಶಲ್ಯಾಧಾರಿತ ಕಾರ್ಯಕ್ರಮ 25.10.2023

ಶ್ರೀರಾಮ ಪ್ರ.ದ.ಮಹಾವಿದ್ಯಾಲಯದ ವಾಣಿಜ್ಯ ವಿಭಾಗ ಹಾಗೂ ಕುಕ್ಕೆ ಸುಬ್ರಹ್ಮಣ್ಯ ಮಹಾವಿದ್ಯಾಲಯ ವಾಣಿಜ್ಯ ವಿಭಾಗದ ಜೊತೆಗೆ ಮೆಮೊರಾಂಡಮ್ ಆಫ್ ಅಂಡರ್‌ಸ್ಟಾಡಿಂಗ್ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು. ಇದರ ಪ್ರಕಾರ ವಾಣಿಜ್ಯ ವಿಭಾಗಕ್ಕೆ ಸಂಬಂಧಪಟ್ಟಂತೆ ವಿದ್ಯಾರ್ಥಿಗಳು ಅದೇ ರೀತಿ ಉಪನ್ಯಾಸಕರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಪರಸ್ಪರ ವಿಚಾರಗಳನ್ನು ಹಂಚಿಕೊಳ್ಳುವಂತದ್ದು, ಕೌಶಲ್ಯಾಧಾರಿತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದಾಗಿದೆ. ಕುಕ್ಕೆ ಸುಬ್ರಹ್ಮಣ್ಯ ಕಾಲೇಜಿನ ವಾಣಿಜ್ಯ ವಿಭಾಗದ ಉಪನ್ಯಾಸಕರು ಶ್ರೀ ಶಿವಪ್ರಸಾದ್ ಇವರು ಒಡಂಬಡಿಕೆಯ ಉದ್ದೇಶ ಹಾಗೂ ಅಗತ್ಯತೆಯನ್ನು ತಿಳಿಸಿದರು.

## ABVP ಪ್ರತಿಭಟನೆ 27.10.2023

ಪ್ರಸ್ತುತ ರಾಜ್ಯ ಸರ್ಕಾರವು ವಿದ್ಯಾರ್ಥಿವೇತನ(SC-ST, OBC)ವನ್ನು ನೀಡದೆ ಚೆಲ್ಲಾಟವಾಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಇಂತಹ ನಡೆಯನ್ನು ಖಂಡಿಸಿ ಕಾಲೇಜಿನ ABVP ಘಟಕದ ವತಿಯಿಂದ ಪ್ರತಿಭಟನೆ ನಡೆಸಲಾಯಿತು

## ಗೋರಥ ಯಾತ್ರೆಗೆ ಸ್ವಾಗತ 27.10.2023

ವಿದ್ಯಾಕೇಂದ್ರಕ್ಕೆ ಆಗಮಿಸಿದ ರಾಧಾ ಸುರಭಿ ಗೋಮಂದಿರ, ರಾಷ್ಟ್ರೀಯ ಗೋ ಸೇವಾ ಸಂಸ್ಥಾನ, ಬ್ರಹ್ಮಗಿರಿ, ಗೋವಿನ ತೋಟ ಮತ್ತು ಗೋ ಸೇವಾ ಗತಿ ವಿಧಿ ಕರ್ನಾಟಕ ಇದರ ಸಂಯುಕ್ತ ಆಶ್ರಯದಲ್ಲಿ ಗೋ ನವರಾತ್ರಿ ಉತ್ಸವದ ಸಂದೇಶ ಮತ್ತು ಉದ್ದೇಶವನ್ನು ಸಾರುವ ಗೋರಥ ಯಾತ್ರೆಯನ್ನು ಕಲ್ಲಡ್ಕ ದಲ್ಲಿ ಪುಷ್ಪಾರ್ಚನೆ ಹಾಗೂ ಆರತಿ ಬೆಳಗುವ ಮೂಲಕ ಡಾ. ಪ್ರಭಾಕರ ಭಟ್ ಕಲ್ಲಡ್ಕ ಇವರು ಸ್ವಾಗತಿಸಿದರು. ವಿದ್ಯಾರ್ಥಿ, ಉಪನ್ಯಾಸಕ ವೃಂದವು ಮೆರವಣಿಗೆಯಲ್ಲಿ ರಥವನ್ನು ವಿದ್ಯಾಲಯದ ಪ್ರಾಂಗಣಕ್ಕೆ ಬರಮಾಡಿಕೊಂಡ ನಂತರ ಗೋ ಸೇವಾ ಗತಿ ವಿಧಿಯ ಕರ್ನಾಟಕ ದ.ಪ್ರಾ. ಸಹಸಂಯೋಜಕರಾದ ಶ್ರೀ ಕುಮಾರಸ್ವಾಮಿ ವಿದ್ಯಾರ್ಥಿಗಳ ಜೊತೆಗೆ ಗೋ ಸಂರಕ್ಷಣೆಯ ವಿಷಯವಾಗಿ ಸಂವಾದ ನಡೆಸಿದರು. ಮಾನವಿಕ ಸಂಘದ ನಿರ್ದೇಶಕರಾದ ಶ್ರೀ ಗಂಧರ್ವ ಹಾಗೂ ಸಾಂಸ್ಕೃತಿಕ ಸಂಘದ ನಿರ್ದೇಶಕಿ ಶ್ರೀಮತಿ ಜಯಲಕ್ಷ್ಮಿ ಮಾತಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕಾರ್ಯಾಗಾರದಲ್ಲಿ ಭಾಗಿ 27.10.2023

ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಬಲ್ಮಠ ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ನಡೆದ "ಉದ್ಯೋಗ ಕೌಶಲ್ಯಗಳ" ತರಬೇತಿ ಕಾರ್ಯಾಗಾರದಲ್ಲಿ ಮಹಾವಿದ್ಯಾಲಯದ ಶ್ರೀ ಹರ್ಷಿತ್ ಶ್ರೀಮಾನ್ ಭಾಗವಹಿಸಿದ್ದರು.

## ರಾಷ್ಟ್ರೀಯ ಏಕತಾ ದಿವಸ್ 31.10.2023

ಪ್ರಭಾಸ ಮಾನವಿಕ ಸಂಘದ ವತಿಯಿಂದ ಸರ್ದಾರ್ ವಲ್ಲಭಭಾಯಿ ಪಟೇಲರ ಜನ್ಮದಿನದ ಪ್ರಯುಕ್ತ ಆಯೋಜಿಸಲಾದ ರಾಷ್ಟ್ರೀಯ ಏಕತಾ ದಿವಸ್ ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಸುಕನ್ಯಾ ಮಾತಾಜಿ ಇವರು ವಹಿಸಿದರು. ಈ ಕಾರ್ಯಕ್ರಮದ ಉಪನ್ಯಾಸವನ್ನು ರಶ್ಮಿತಾ ಮಾತಾಜಿ ಕನ್ನಡ ಉಪನ್ಯಾಸಕರು ಇವರು ಸದೃಢ ಭಾರತವನ್ನು ಕಟ್ಟುವಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲ್ರ ಪಾತ್ರದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಶುಭಕೋರುವ :
**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**
ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373
ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು
ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು
91ದಿನಗಳವರೆಗೆ – 7.5%
92ರಿಂದ 181 ದಿನಗಳು – 8%
182 ರಿಂದ 364 ದಿನಗಳು – 9%
1 ವರ್ಷ ಮತ್ತು ಮೇಲ್ಪಟ್ಟು – 9.5%

ಸೌಲಭ್ಯ
ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ
Vol. : 10 Issue :6 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363